


### ಜಪಾನ್ ಪರಿಚಯ

'ಕೊನೆಚಿವಾ ಜಪಾನ್', ಗೀತಾ ಕುಂದಾಪುರ ಅವರ ಮುಖಪುಟ ಲೇಖನ (ಸುಧಾ, ಆ. 9) ಚೆನ್ನಾಗಿದೆ. ಪ್ರವಾಸೋದ್ಯಮದತ್ತ ತನ್ನನ್ನು ತಾನು ತೆರೆದುಕೊಳ್ಳುತ್ತಿರುವ 'ಜಪಾನ್' ಕುರಿತ ಸಚಿತ್ರ ಪರಿಚಯ ಲೇಖನ ಮನಸ್ಸನ್ನು ಗೆದ್ದಿತು. ಜಪಾನಿನ ಭಾಷೆಯಲ್ಲಿ ಬಹುವಾಗಿ ಬಳಸುವ ಶಬ್ದಗಳ ಯಾದಿಯಲ್ಲಿ 'ಸಯೋನಾರ' ಶಬ್ದವನ್ನು ಸೇರಿಸಬೇಕಿತ್ತು. 'ಸಯೋನಾರ ಎಂದರೆ ಬೈಬೈ, ಟಾಟಾ ಮತ್ತೆ ಭೇಟಿ ಆಗೋಣ ಎಂದರ್ಥ. 'ಲವ್ ಇನ್ ಟೋಕಿಯೊ' ಚಿತ್ರದ ಜನಪ್ರಿಯ 'ಸಯೋನಾರ' ನೆನಪಿಗೆ ಬಂತು.

—ಮುಕುಂದ ಹೆರಕಲ್ಲ ಕಲಬುರ್ಗಿ,
ಮಧುರ ಸುಬ್ರಹ್ಮಣ್ಯ ಬೆಂಗಳೂರು

### ಸಮಗ್ರ ಚಿತ್ರಣ

ಒಮ್ಮೆ ಸರ್ವನಾಶ ಹೊಂದಿದ ದೇಶ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಛಲ ಬಿಡದೆ ಸಾಧಿಸಿದ ಪ್ರಗತಿ, ಯಶೋಗಾಥೆಯ ಚಿತ್ರಣವನ್ನು ಮುಖಪುಟ ಲೇಖನ ನೀಡಿದೆ.

—ಕೆ.ಪಿ.ರಾಮಗುಂಡಿ ಬೈಲಹೊಂಗಲ

### ವಾಸ್ತವದ ಚಿತ್ರಣ

'ನಿಮ್ಮೊಡನೆ'ಯಲ್ಲಿ 'ಸಣ್ಣ ಸಣ್ಣ ಖುಷಿ ಕಸಿಯಬೇಡಿ' (ಎನ್.ಉದಯಕುಮಾರ್) ಬರಹ ವಾಸ್ತವಿಕತೆಯನ್ನು ಬಿಚ್ಚಿಟ್ಟಿದೆ. ಮಧ್ಯಮ ವರ್ಗದವರಿಗೆ ನಗರ ಜೀವನ ತುಂಬ ದುಬಾರಿಯಾಗಿದೆ.

— ನಿರ್ಮಲಾ ಶ್ರೀನಿವಾಸ್ ಬೆಂಗಳೂರು,
ಬಿ.ಚಂದ್ರೇಗೌಡ ಬೆಂಗಳೂರು

### ಜನಪ್ರಿಯ ಹಲಸು

'ಹಲಸು ಆಂದೋಲನಕ್ಕೆ 10' (ನಾ. ಕಾರಂತ ಪೆರಾಜೆ) ಲೇಖನ ಸುಂದರವಾಗಿತ್ತು. ಹಲಸು ಈಗ ರಾಜ್ಯದಲ್ಲಿ ಮಾತ್ರವಲ್ಲದೆ ದೇಶ ವಿದೇಶಗಳಲ್ಲೂ ಜನಪ್ರಿಯ ಪಡೆದಿರುವುದು ಸಂತೋಷ.

—ರವೀಂದ್ರನಾಥ ಶಿ.ಯಡಹಳ್ಳಿ ಬೀಳಗಿ,
ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಆಹಾರ ಸ್ವಾವಲಂಬನೆ

ಹಲಸಿನ ಕಾಯಿ, ಸೊಳೆ, ಮಿಡಿ, ಮಿಲ್ಕ್ ಶೇಕ್, ಜ್ಯೂಸ್ ವಿಶೇಷವಾಗಿ ಪ್ಯಾನ್‌ಕೇಕ್ ಮತ್ತು ಜಾಕ್ ತಮಾಲೆ (ಅಮೆರಿಕ)ಯಾಗಿ ಹೆಚ್ಚು ಬಳಕೆಯಾಗುತ್ತಿರುವುದು ಸಂತಸಕರ ಸುದ್ದಿ. ಹಲಸು ಆಹಾರ ಪದಾರ್ಥಗಳಲ್ಲಿ ಪೂರಕ ಉತ್ಪನ್ನವಾಗಿ ಆಹಾರ ಸ್ವಾವಲಂಬನೆಗೆ ದಾರಿಯಾಗುತ್ತಿದೆ.

—ಕೊಹಿಮ ಬಸರಕೋಡು,
ಸುಂದರ್ ಬೆಂಗಳೂರು

### ಸ್ವಾರಸ್ಯಕರ

ಪ್ರವಾಸ ಲೇಖನ 'ತೇಗದ ಸಿರಿ ಬೆಳಕಿನಲ್ಲಿ' (ಬಿ.ಎಂ. ಹನೀಫ್) ಸ್ವಾರಸ್ಯಕರವಾಗಿದೆ. ಹಲವು ಬಾರಿ ಊಟಿಗೆ ಭೇಟಿ ನೀಡಿದ್ದರೂ ನಿಲಂಬೂರು ಪ್ರವಾಸಿ ತಾಣವೆಂದು ಅರಿವಿಗೆ ಬಂದಿರಲಿಲ್ಲ. ಇಷ್ಟು ಅಗಾಧ ವಿಸ್ತೀರ್ಣದ ತೇಗದ ಮರಗಳು, ತೂಗು ಸೇತುವೆ ಮುಂತಾದವನ್ನು ಕಣ್ತುಂಬಿಕೊಳ್ಳುವ ಆಸೆಯಾಗಿದೆ.

—ಎಂ. ಎಸ್. ಬೆಂಗಳೂರು

### ಆರೋಗ್ಯ ಲೇಖನ

'ಮಕ್ಕಳಲ್ಲಿ ಮೂತ್ರದ ಸೋಂಕು' (ಡಾ.ಲೀಲಾವತಿ ದೇವದಾಸ್) ಹಲವಾರು ಮಹತ್ವಪೂರ್ಣ ಮಾಹಿತಿಗಳನ್ನು ನೀಡಿದೆ. ಮಕ್ಕಳಲ್ಲಿ ಮೂತ್ರದ ಸೋಂಕು ಕಂಡುಬಂದಾಗ ಪೋಷಕರು ಅದನ್ನು ಹಗುರವಾಗಿ ಪರಿಗಣಿಸಿದೆ ಸಮಸ್ಯೆಗೆ ಸ್ಪಂದಿಸಬೇಕು. ವೈದ್ಯರಿಂದ ಅಗತ್ಯ ಚಿಕಿತ್ಸೆ ಕೊಡಿಸಬೇಕು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು

### ಮನೋಜ್ಞ ಕಥೆ

ಕಥೆ 'ಸಗೋತ್ರ' (ಅಶೋಕ ಪರ್ವತಿ) ಮನೋಜ್ಞವಾಗಿದೆ. ಹೆಂಡತಿಯನ್ನು ಕಳೆದುಕೊಂಡ ರಾಯರು ಹಾಗೂ ವಿಧವೆ ಸರೋಜಾ.. ಇವರಿಬ್ಬರು ತಮ್ಮ ಮಕ್ಕಳಿಗೆ ಮದುವೆಗಾಗಿ ಹೆಣ್ಣು ಗಂಡುಗಳನ್ನು ಹುಡುಕಾಟದಲ್ಲಿದ್ದಾಗ 'ಸಗೋತ್ರ'ದ ಪರಿಣಾಮವಾಗಿ ಮಕ್ಕಳ ತಾಯಿ ತಂದೆಯೇ ಎರಡನೇ ಮದುವೆಯಾಗುವಂತಹ ಕಥೆ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ.

—ವಿ. ಹೇಮಂತಕುಮಾರ ಬೆಂಗಳೂರು,
ಅಶೋಕ ನಾ. ಪುರಾಣಿಕ ಬೆಳಗಾವಿ,
ಎ.ಪಿ.ರಂಗನಾಥ್ ಮೈಸೂರು,
ಅಂಚೆ ಸುಬ್ರಹ್ಮಣ್ಯ ಕೊಪ್ಪ

### ಮಕ್ಕಳ ಕಥೆ

'ಎಳೆಯರ ಅಂಗಳ'ದಲ್ಲಿ ಮಕ್ಕಳ ಕಥೆ ಹಣೆಬರಹ (ವಿ. ಸತ್ಯನಾರಾಯಣರಾವ್) ಚೆನ್ನಾಗಿತ್ತು.

—ರತ್ನಾಕರ ಹೆಗಡೆ ಕಟ್ಟೆ ಮೂಡುಬಿದರೆ

### ಶಿಕಾಕು ಅವರಿಗೆ ಶ್ರದ್ಧಾಂಜಲಿ

'ವಿಚಾರ ಲಹರಿ' ಪುಟವನ್ನು ತಪ್ಪದೇ ಓದುತ್ತಿದ್ದ ನಮಗೆ ಇದರ ಲೇಖಕರು ಯಾರೆಂಬುದು ತಿಳಿದಿರಲಿಲ್ಲ. ಶಿಕಾಕು (ಶಿವರಾಮ ಕಾಡನಕುಪ್ಪೆ) ಎಂದು ಆಮೇಲೆ ತಿಳಿಯಿತು. ಆದರೆ ಈ ಅಂಕಣ ಓದಿದ ಬಳಿಕ ಒಂದು ನಿಮಿಷವಾದರೂ ಧನ್ಯತೆಯ ಅನುಭವವಾಗುತ್ತಿತ್ತು. ಹೊಸ ಹೊಸ ವಿಷಯಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದರು. 'ಸುಧಾ'ಗೆ ಅವರು ನೀಡಿರುವ ಅಂತಿಮ ಸಂದೇಶ ಓದಿ ಕಣ್ಣು ಒದ್ದೆಯಾದದ್ದು ಸತ್ಯ!

—ಡಾ. ಕೆ.ಕೆ. ಜಯಚಂದ್ರ ಗುಪ್ತ ಹಾಸನ,
ಮಲ್ಲಿಕಾರ್ಜುನ ಹುಲಗಬಾಳಿ ಬನಹಟ್ಟಿ,
ಡಿ. ದೊಡ್ಡಲಿಂಗೇಗೌಡ ಕೊಳ್ಳೇಗಾಲ,
ಟಿ.ಎಂ. ಮಾನಪ್ಪ ಶಿವಮೊಗ್ಗ,
ಚನ್ನಬಸವ ಪುತ್ತೂರ ಚಿತ್ರದುರ್ಗ

### ಲಹರಿ— ಆಪ್ತ

'ಲಹರಿ'ಯಲ್ಲಿ 'ಮಳೆಯೊಂದಿಗೆ ಮೊರೆವ ಮನ' (ಅಲಕಾ ಕಟ್ಟೆಮನೆ) ಬರಹ ಆಪ್ತವಾಗಿದೆ. 'ಮಳೆ'ಯ ಕಿರಿಕಿರಿ, ರೌದ್ರವ, ಆಪ್ತತೆ, ಹಾಗೂ ಕೊನೆಯ ಸಾಲು, ಅಂತೂ 'ಮಳೆ'... ಮನಸ್ಸಿಗೆ ಮುದ ನೀಡಿತು.

—ವೀರಭದ್ರ ರಟ್ಟಿಹಳ್ಳಿ ಹುಬ್ಬಳ್ಳಿ, ಪ್ರಭು ಐನಂಡ

### ಉಪಯುಕ್ತ ಮಾಹಿತಿ

'ಕಾವೇರಿ ಕಲಹದಲ್ಲಿ ಚಿಗುರಿದ ಪ್ರಾಧಿಕಾರ'(ಟಿ.ಎಂ. ಶಿವಶಂಕರ್) ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ.

—ಕಾರ್ಗಲ್ ಗುರುಮೂರ್ತಿ ಬೆಂಗಳೂರು



